# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



## ಸೇವಕನಾದ ಯೋಸೇಫನನ್ನು ದೇವರು ಘನ ಪಡಿಸಿದನು

ಬರಹಗಾರರು: Edward Hughes

ಚಿತ್ರಲೇಖಕರು: M. Maillot; Lazarus

ಅಳವಡಿಸುವವರು: M. Maillot; Sarah S.

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2014 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯೋಸೇಫನು ಅನ್ಯಾಯವಾಗಿ ತನ್ನ ಹಿಂದಿನ ದಣಿಯಾದ ಪೋತೀಫರನಿಂದ ಸೆರೆಮನೆಯಲ್ಲಿ ಹಾಕಿಸಲ್ಪಟ್ಟನು. ಸೆರೆಮನೆಯಲ್ಲಿ ಯೋಸೇಫನು ವಿಧೇಯನಾಗಿಯೂ ಹಾಗೂ ಉಪಯುಕ್ತನಾಗಿದ್ದನು.



ಯೋಸೇಫನು ಸೆರೆಮನೆಯ ಜೀವನ
ಶೈಲಿಯನ್ನು ಕ್ರಮವಾಗಿ ವ್ಯವಸ್ಥೆ
ಮಾಡಬಲ್ಲನು ಎಂದು ಸೆರೆಮನ
ಅಧಿಕಾರಿ ಅವನಲ್ಲಿ ಭರವಸವಿಟ್ಟನು.
ಯೋಸೇಫನೊಂದಿಗೆ ದೇವರು
ಇದ್ದರಿಂದ ಸೆರೆಮನೆಯು
ಎಲ್ಲರಿಗೂ ಉತ್ತಮ
ಸ್ಥಳವಾಗಿತ್ತು.



ಅರಸನಿಗೆ ಭಕ್ಷಗಳನ್ನು ಮಾಡಿಕೊಡುವವನೂ
ಹಾಗೂ ಪಾನಕ ಕೊಡುವವನೂ
ಸೆರೆಮನೆಯಲ್ಲಿ ಇದ್ದರು. ಒಂದು ದಿನ
ಯೋಸೇಫನು "ನೀವು ಯಾಕೆ ಅಷ್ಟು ಚಿಂತಿಸುತ್ತಿದ್ದಿರಿ"?



ಎಂದು ಅವರನ್ನು ಕೇಳಿದನು. ಅವರು ಅವನಿಗೆ – ನಮಗೆ ಕನಸುಬಿತ್ತು (ಸ್ವಪ್ನಬಿತ್ತು) ಅದರ ಅರ್ಥವನ್ನು ಹೇಳುವವರು ಯಾರೂ ಇಲ್ಲ ಎಂದು ಹೇಳಿದರು.



ಕನಸುಗಳ ಅರ್ಥವು ದೇವರಿಂದ ದೊರಕಬಹುದು "ನಿವು ನಿಮ್ಮ ಕನಸುಗಳನ್ನು ನನಗೆ ತಿಳಿಸಿರಿ" ಎಂದು ಯೋಸೇಫನು ಹೇಳಿದನು.



ನಿನ್ನ ಕನಸಿನ ಅರ್ಥವೇನೆಂದರೆ–
ಮೂರು ದಿನಗಳೊಳಗೆ ನೀನು ತಿರುಗಿ
ಮುಂಚಿನಂತೆ ಅರಸನಾದ ಫರೋಹನ
(ಪಾನ ದಾಯಕನಾಗಿ)
ಸೇವೆಮಾಡುವಿ
ಎಂದು
ಯೋಸೇಫನು
ಪಾನಕ
ಕೊಡುವವನಿಗೆ
ಹೇಳಿದನು.







"ನನ್ನನ್ನು ಜ್ಞಾಪಕಮಾಡಿಕೊ ಹಾಗೂ ನನ್ನನ್ನು ಸೆರೆಯಿಂದ ಬಿಡಿಸಲು ಫರೋಹನನ್ನು ಕೇಳು ಎಂದನು. ಭಕ್ಷಗಳನ್ನು ಮಾಡಿಕೊಡುವವನ ಕನಸು ಕೆಟ್ಟ ವಿಷಯದಿಂದ ಕೂಡಿತ್ತು. ಅದೆನೆಂದರೆ "ಮೂರು ದಿನಗಳೊಳಗೆ ನೀನು ಸಾಯುವಿ" ಎಂದು ಯೋಸೇಫನು ಹೇಳಿದನು. ಇಬ್ಬರ ಕನಸು ನೆರವೇರಿತು.



ಫರೋಹನನಿಗೆ ಒಂದು ಸಮಸ್ಯೆ ಬರುವವರೆಗೂ
ಪಾನಕೋಡುವ ವ್ಯಕ್ತಿಯು ಯೋಸೇಪನ ಬಗ್ಗೆ ಮರೆತು
ಹೋಗಿದ್ದನು. ಫರೋಹನು "ನನಗೆ ಒಂದು
ಕನಸು ಬಿತ್ತು" ಎಂದು
ಹೇಳಿದನು.

ಕನಸಿನ
ಅರ್ಥವನ್ನು
ಜ್ಞಾನಿಗಳಾಗಲಿ ಮತ್ತೆ
ಯಾರೆಯಾಗಲಿ ಬಿಡಿಸಲಾಗಲಿಲ್ಲ, ಪಾನ
ಕೊಡುವ ವ್ಯಕ್ತಿಯು ಸೇರೆಮನೆಯಲ್ಲಿದ್ದ
ಯೋಸೇಫನನ್ನು ನೆನಪಿಸಿಕೊಂಡು
ಫರೋಹನನಿಗೆ ತಿಳಿಸಿದನು.

ಫರೋಹನು ತಕ್ಷಣವೆ ಯೋಸೇಫನನ್ನು ಕರೆ ಕಳುಹಿಸಿದನು. "ನಿನ್ನ ಕನಸು ದೇವರಿಂದ ಬಂದ ವರ್ತಮಾನ, ಐಗುಪ್ತದೇಶದಲ್ಲಿ ಬಹುವಿಶೇಷವಾದ ಏಳು ಸುಭಿಕ್ಷ ವರ್ಷಗಳ ತರುವಾಯ ಏಳು ದುರ್ಭಿಕ್ಷ ವರುಷಗಳೂ ಬರುವವು" ಎಂದು ಯೋಸೇಫನು ಅರಸನಿಗೆ ಹೇಳಿದನು.



‘ಫಲ ಭರಿತವಾದ ಈ ಏಳು ವರ್ಷಗಳಲ್ಲಿ ಬೇಕಾದ ಆಹಾರವನ್ನು ಸಂಗ್ರಹಿಸು’ ಎಂದು ಯೋಸೇಫನು ಫರೋಹನಿಗೆ ಸಲಹೆ ನೀಡಿ, ಇಲ್ಲವಾದರೆ ನಿನ್ನ ಜನರು ಬರಗಾಲದಿಂದ ತತ್ತರಿಸಿ ಆಹಾರವಿಲ್ಲದೆ ಸತ್ತಾರು?



ದೇವರು ನಿನ್ನೊಂದಿಗಿದ್ದಾನೆ, ಎನ್ನಲು ಫರೊಹನನು 'ನನ್ನ ನಂತರ ನೀನೆ ಈ ಐಗುಪ್ತಕ್ಕೆ ಸರ್ವಾದಿಕಾರಿ' ಎಂದು ಘೋಸಿಸಿದನು.



ಏಳು ಸುಭಿಕ್ಷ ವರುಷಗಳ, ನಂತರ ಏಳು ದುರ್ಭಿಕ್ಷ ವರುಷಗಳು ಬಂದವು. ಐಗುಪ್ತವನ್ನು ಹೊರತು ಪಡಿಸಿ ಎಲ್ಲಾ ದೇಶಗಳಲ್ಲಿ ಆಹಾರದ ಕೊರತೆಯುಂಟಾಯಿತು.



ಯಾಕೆಂದರೆ ಅವರು ಬುದ್ದಿಯಿಂದ ಹೆಚ್ಚಾದ ಆಹಾರವನ್ನು ಸಂಗ್ರಹಿಸಿಕೊಂಡಿದ್ದರು. ದೂರದ ದೇಶದಲ್ಲಿರುವ ಯೋಸೇಫನ ಕುಟುಂಬಕ್ಕೂ ಸಹ ಆಹಾರದ ಕೋರತೆ ಏದುರಾಯಿತು.



ಕಾಳನ್ನು ಖರೀದಿಸಲು ಎಲ್ಲಾ ದೇಶಗಳ ಜನರು ಐಗುಪ್ತಕ್ಕೆ ಬಂದರು. "ನೀವು ಕೊಡ ಹೋಗಿ ಖರಿದಿಸಿಕೊಂಡು ಬನ್ನಿ ಇಲ್ಲವಾದರೆ ಆಹಾರವಿಲ್ಲದೆ ಸತ್ತೇವ್ರೂ" ಎಂದು ಯಾಕೋಬನು ಹೇಳಿದಾಗ ಅವನ ಮಕ್ಕಳು ಸಿದ್ದರಾಗಿ ಆಹಾರ ಖರೀದಿಸಲು ಹೋದರು.



ಐಗುಪ್ತದ ಅಧಿಕಾರಿಗೆ ಯಾಕೋಬನ ಮಕ್ಕಳು ತಲೆಬಾಗಿ ನಮಸ್ಕರಿಸಿದರು. ಅವರ ತಮ್ಮನಾದ ಯೋಸೇಫನನ್ನು ಗುರುತಿಸಲಾಗಲಿಲ್ಲ. ಆದರೆ ಯೋಸೇಫನು ಅವರನ್ನು ಗುರುತಿಸಿದನು. ಯೋಸೇಫನು ಚಿಕ್ಕವನಾಗಿದ್ದಾಗ ಕಂಡಿದ್ದ ಕನಸನ್ನು ನೆನಪಿಸಿಕೊಂಡನು. ದೇವರು ಅವನನ್ನು ಅವರ ಅಣ್ಣಂದಿರಗಿಂತ ಮೇಲಕ್ಕೆತ್ತಿದ್ದನು.



ಯೋಸೇಫನು ಅತಿ ಬುದ್ಧಿವಂತಿಕೆಯಿಂದ,
ಅವನ ಅಣ್ಣಂದಿರೊಂದಿಗೆ ಬಿರುಸಾಗಿ
ಮಾತನಾಡಿ ಸೀಮೆಯೋನನನ್ನು
ಒತ್ತೆಯಾಳಾಗಿಟ್ಟುಕೊಂಡು, ...



... "ನೀವು ನಿಮಗೆ ಬೇಕಾದ ಆಹಾರವನ್ನು ತಗೆದುಕೊಂಡು ನಿಮ್ಮ ಚಿಕ್ಕ ತಮ್ಮನನ್ನು ಕರೆದುಕೊಂಡು ಬನ್ನಿ ಇದರಿಂದ ನನಗೆ ಗೊತ್ತಾಗುತ್ತದೆ ನೀವು ಗೂಡಾಚಾರರು ಹೌದೂ ಅಲ್ಲವ್ರೂ ಎಂದು" ಅಂದನು.



ಸೂಮಾರು ವರ್ಷಗಳ ಹಿಂದೆ ತಮ್ಮನಾದ ಯೋಸೆಫನನ್ನು ಮಾರಿಬಿಟ್ಟದ್ದರಿಂದ ದೇವರು ಅವರನ್ನು ಶಿಕ್ಷಿಸುತ್ತಿದ್ದಾನೆ ಎಂದುಕೊಂಡರು.



ಯಾಕೋಬ ಮತ್ತು ಅವನ ಮಕ್ಕಳು ಗಲಿಬಿಲಿಗೋಳಗದರು.
ನಮ್ಮ ಹಣವು ನಮ್ಮ ಧಾನ್ಯದ ಚೀಲದಲ್ಲಿ ಅದೆ, ಆದರೆ
ಆ ದೇಶಾಧಿಪತಿಯು ನಮಗೆ ಬೆನ್ಯಾಮಿನನನ್ನು
ಕರೆದುಕೊಂಡು ಬರಲು ಹೆಳಿದ್ದಾನೆ. ಯಾಕೊಬನು
ಬೆನ್ಯಾಮಿನನನ್ನು ಕಳುಹಿಸಲು ಒಪ್ಪಲಿಲ್ಲ.



ಅದರೆ ಅತಿ ಬೇಗನೆ ಆಹಾರವು ತೀರಿ ಹೊದದ್ದರಿಂದ ಅಣ್ಣಂದಿರು ಆಹಾರವನ್ನು ಖರೀದಿಸಲು ಮತ್ತೆ ಐಗುಪ್ತಿಗೆ ತೆರಳಿದರು, ಬೆನ್ಯಾಮಿನನು ಸಹ ಅವರ ಸಂಗಡ ಹೋರಟನು.



ಯೋಸೇಫನು ಬೆನ್ಯಾಮಿನನನ್ನು ನೋಡಿ ತನ್ನ ಆಳುಗಳಿಗೆ ಒಂದು ದೊಡ್ಡ ಔತನವನ್ನು ಸಿದ್ಧಮಾಡಲು ಆಜ್ಞಾಪಿಸಿದನು. ಅಣ್ಣಂದಿರು ಸಹ ಆಹ್ವಾನಿಸಲ್ಪಟ್ಟಿದ್ದರು. "ನಿಮ್ಮ ತಂದೆ ಜೀವತವಾಗಿ ಕ್ಷೇಮವಾಗಿದ್ದಾನೋ?" ಎಂದು ಯೋಸೇಫನು ಕೇಳಿದನು. ಒಂದು ವೇಳೆ ಯಾವ ರೀತಿಯಾಗಿ ತನ್ನ ಕುಟುಂಬವನ್ನು ಒಂದುಗೂಡಿಸಬಹುದೆಂದು ಆಲೋಯೋಚಿಸಿರಬಹುದು.



ತನ್ನ ಅಣ್ಣಂದಿರು ಅನೇಕ ವರ್ಷಗಳ ಹಿಂದೆ ಮಾಡಿದ ಪಾಪಕ್ಕೆ ಪಶ್ಚಾತಾಪ ಪಡುತ್ತೀದ್ದಾರಾ? ಎಂದು ತಿಳಿಯಲು ಬಯಸಿದನು. ಔತನ ಮುಗಿದ ಮೇಲೆ "ನೀವು ಹಣವನ್ನು ಕದ್ದಿದ್ದೀರಿ ಎಂದು ದೂರಿದನು, ನಿಮ್ಮನ್ನು ಶಿಕ್ಷೀಸುವುದಕ್ಕಾಗಿ ಬೆನ್ಯಾಮಿನನನ್ನು ನನ್ನ ಆಳಾಗಿ ಇಟ್ಟುಕೊಳ್ಳುತ್ತೇನೆ"



"ಎಂದು ಯೋಸೆಫನು ಹೇಳಿದಾಗ," ನನ್ನ ಒಡೆಯನೇ ಅವನ ಬದಲಾಗಿ ನನ್ನ ಜೀವವನ್ನು ತಗೆ ಎಂದು ಯೂದನು ಮೋರೆಯಿಟ್ಟನು.

ಒಂದು ಸಮಯದಲ್ಲಿ
ಯೋಸೆಫನನ್ನು ಮಾರಿಬಿಡಲು
ಯೂದನು ಸಲಹೆ ನೀಡಿದ್ದನು
ಆದರೆ ಈಗ ಬದಲಾಗಿದ್ದಾನೆ
ಇಂದು ಯೋಸೆಫನು
ತಿಳಿದುಕೊಂಡನು.





ತನ್ನ ಪ್ರೀತಿಯನ್ನು ಅವನ
ಕುಟುಂಬದೊಂದಿಗೆ ತುಂಬಾ
ಸಮಯದವರೆಗೆ ಯೋಸೆಫನಿಗೆ
ಮರೆಮಾಚಲಾಗಲಿಲ್ಲ.

"ಆಗ ಎಲ್ಲಾ ಐಗುಪ್ತರನ್ನು ಹೊರಗೆ ಕಳುಹಿಸಿ ಅಳಲು ಆರಂಭಿಸಿದನು." ನೀವು ಐಗುಪ್ತರಿಗೆ ಮಾರಿದ ಯೋಸೆಫನು ನಾನೇ ಎಂದು ಹೇಳಿದಾಗ ಎಲ್ಲರು ಭಯಪಟ್ಟು ಅಶ್ಚರ್ಯವಾಗಿ ಏನನ್ನು ಮಾತನಾಡದೆ ಸುಮ್ಮನಿದ್ದರು.



ಯೋಸೆಫನು ಎಲ್ಲರನ್ನು ಉತ್ತೇಜನಪಡಿಸಿದನು.
ದೇವರು ನನ್ನನ್ನು



ಐಗುಪ್ತದಲ್ಲಿ ಒಡೆಯನನ್ನಾಗಿ
ಮಾಡಿದ್ದಾನೆ ಇದರಿಂದ ನಿಮ್ಮನ್ನು
ಈ ಭೀಕರವಾದ ಬರದಿಂದ
ಕಾಪಾಡುವಂತಾಯಿತು.



"ಹೋಗಿ ನನ್ನ ತಂದೆಯನ್ನು
ಕರೆದುಕೊಂಡು ಬನ್ನಿರಿ
ನಾನು ನಿಮ್ಮನ್ನು ಸುರಕ್ಷಿತವಾಗಿ
ನೋಡಿಕೋಳ್ಳುತ್ತೇನೆ" ಅಂದನು.



ಯಾಕೋಬನು,
ಯೋಸೆಫನು ಮತ್ತು ಎಲ್ಲಾ
ಕುಟುಂಬದವರು ಸೇರಿಕೊಂಡು
ಸಮೃದ್ಧಿಯಾಗಿ ಸಮಧಾನದಿಂದ
ಐಗುಪ್ತದಲ್ಲಿ ಜೀವಿಸಿದರು.

# ಸೇವಕನಾದ ಯೋಸೇಫನನ್ನು ದೇವರು ಘನ ಪಡಿಸಿದನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಆದಿಕಾಂಡ 39–45

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16